






ಕೆಲವು ಆಫ್ರಿಕನ್ನರು ತಮ್ಮ ಸ್ವಇಚ್ಛೆಯಿಂದ ಮನುಜಾಲಯದಲ್ಲಿ ನೌಕರಿಗಾಗಿ ಬಂದು ಸೇರುತ್ತಿದ್ದರು. ಆದರೆ ಅವರೂ ಶೋಷಣೆಗೆ ಒಳಗಾಗುತ್ತಿದ್ದರು. ಮನುಜಾಲಯದಿಂದ ತಪ್ಪಿಸಿಕೊಂಡ ಕೆಲವು ಜನರು ಘನತೆಯಿಂದ ಹಾಗು ಆರೋಗ್ಯವಾಗಿ ಬದುಕಲು ಸಾಧ್ಯವಾಗದೆ, ಸಿಡುಬು, ದಡಾರ ಹಾಗೂ ಕ್ಷಯ ರೋಗಗಳಿಗೆ ತುತ್ತಾಗಿ ಫ್ರಾನ್ಸ್ ಬೀದಿಗಳಲ್ಲಿ ಸಾವನ್ನಪ್ಪುತ್ತಿದ್ದರು.

ಈ ಮನುಜಾಲಯವು ಎಷ್ಟು ಜನಪ್ರಿಯವಾಯಿತೆಂದರೆ, ಮೂಲ ಆಫ್ರಿಕಾದ ಬುಡಕಟ್ಟು ಜನರ ಗ್ರಾಮಗಳನ್ನು ಹೋಲುವಂತಹ ನೀಗ್ರೋ ವ್ಹಿಲೇಜ್‌ಗಳನ್ನು ಜರ್ಮನಿಯಲ್ಲಿ ನಿರ್ಮಿಸಿ ಜನರನ್ನು ಆಕರ್ಷಿಸಲಾಗುತ್ತಿತ್ತು. ಆ ವೇಳೆಗೆ ಆಗಲೇ ಡಾರ್ವಿನಿಸಂ ಕಲ್ಪನೆ ಜನಪ್ರಿಯವಾಗಿದ್ದರಿಂದ ನೀಗ್ರೋ ವ್ಹಿಲೇಜ್‌ಗಳು ಜನಪ್ರಿಯವಾದವು. ಪ್ಯಾರಿಸ್‌ನಲ್ಲಿ ಇಂತಹ ಪ್ರಯತ್ನಗಳು ನಡೆದು 1931ರ ವೇಳೆಗೆ ಲಕ್ಷಾಂತರ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾದವು.

ಮನುಕುಲದ ಅತ್ಯಂತ ಶೋಚನೀಯ ಚಾರಿತ್ರಿಕ ಘಟನೆ ತೀರಾ ಇತ್ತೀಚಿನ ಇತಿಹಾಸದ ಒಂದು ಭಾಗವಾಗಿರುವುದು ಅವಮಾನಕರ ಸಂಗತಿ. ಕಾಲ ಕ್ರಮೇಣ ಇಂಥ ಅಮಾನವೀಯ ನಡೆ ತಗ್ಗಿದ್ದರೂ ಇಂದಿಗೂ ಅದರ ಅವಶೇಷಗಳು ಅಲ್ಲಲ್ಲಿ ಕಂಡುಬರುತ್ತವೆ.

ಯೂರೋಪಿಯನ್ನರಿಗೆ ಇದರಿಂದ ಜ್ಞಾನೋದಯವಾಯಿತೇನೋ ನಿಜ. ಆದರೆ, ಇತರ ಜನಾಂಗಗಳನ್ನು ಕೀಳಾಗಿ ನೋಡುವ ಅವರ ಮನೋಧರ್ಮ ಬದಲಾಗಿಲ್ಲ. 19ನೇ ಶತಮಾನದಿಂದಲೂ ಜನಾಂಗೀಯ ವಾದವನ್ನು ದಮನ ಮಾಡುವ ಯತ್ನ ನಡೆದರೂ ಸಂಪೂರ್ಣ ಯಶಸ್ಸನ್ನು ಕಂಡಿಲ್ಲ.

ಎರಡನೆಯ ಮಹಾ ಯುದ್ಧದ ನಂತರ ಮನುಜಾಲಯವನ್ನು ನಿಷೇಧಿಸಿದ ಮೊದಲ ವ್ಯಕ್ತಿ ಅಡಾಲ್ಫ್ ಹಿಟ್ಲರ್. ಆ ವೇಳೆಗೆ ಚಲನ ಚಿತ್ರಗಳು ಪ್ರಭಾವಶಾಲೀ ಮನರಂಜನೆಯ ಮೂಲವಾಗಿ ಬೆಳೆದಿದ್ದರಿಂದ ಜನರಲ್ಲಿ ಮನುಜಾಲಯದ ಬಗ್ಗೆ ಆಸಕ್ತಿ ಕಡಿಮೆಯಾಯಿತು. ಕೊನೆಗೆ ಮನುಜಾಲಯಗಳನ್ನು ಅನೈತಿಕ ಎಂದು ಘೋಷಿಸಿ ವಿಶ್ವಾದ್ಯಂತ ಅದನ್ನು ನಿಷೇಧಿಸಲಾಯಿತು. ಪ್ರಪಂಚ ಕಂಡ ಕೊನೆಯ ಮನುಜಾಲಯು 1958ರ ಬೆಲ್ಜಿಯಂನಲ್ಲಿತ್ತು.



## ಓಟ ಬೆಂಗ

ಮಾನವಾಲಯದ ಪ್ರದರ್ಶನಗಳಲ್ಲಿ ಬಹಳ ಖ್ಯಾತಿ ಪಡೆದವನು 23 ವರ್ಷದ ಒಬ್ಬ ಕುಬ್ಜ. 4 ಅಡಿ 11 ಅಂಗುಲ ಇದ್ದ ಇವನ ಹೆಸರು ಓಟ ಬೆಂಗ. ಆನೆಗಳ ಮಾವುತನ ಕೆಲಸ ಕೊಡುವುದಾಗಿ ನಂಬಿಸಿ ಇಲ್ಲಿಗೆ ತಂದು, ಕೋತಿಗಳ ನಡುವೆ ಪಂಜರದಲ್ಲಿ ಇರಿಸಲಾಗಿತ್ತು. ಆಫ್ರಿಕನ್ ಅಮೆರಿಕನ್ ಪಾದ್ರಿಗಳು ಮನುಷ್ಯನಿಗೆ ಸಲ್ಲಬೇಕಾದ ಕನಿಷ್ಠ ಘನತೆಯಿಂದ ವಂಚಿತನಾದ ಇವನನ್ನು ಇತರ ಪ್ರಾಣಿಗಳೊಂದಿಗೆ ಪಂಜರದಲ್ಲಿ ಇರಿಸಿದ್ದನ್ನು ಖಂಡಿಸಿದರು.

## ಸೆರ ಬಾರ್ಟ್‌ಮ್ಯಾನ್



ಆ ದಿನಗಳಲ್ಲಿ ಅವಳ ವಿಶಾಲವಾದ ನಿತಂಬಗಳ ಸಲುವಾಗಿ ಅವಳನ್ನು ವೀನಸ್ ಎಂದು ಕರೆಯುತ್ತಿದ್ದರು. ವೀನಸ್ ರೋಮನ್ ಪ್ರೇಮ ದೇವತೆ. ಇಪ್ಪತ್ತರ ಹರೆಯದ ಆಫ್ರಿಕನ್ ಹುಡುಗಿ ಸೆರ ಬಾರ್ಟ್ ಮ್ಯಾನ್, ಹಣ ಮತ್ತು ಖ್ಯಾತಿಯನ್ನು ಅರಸುತ್ತಾ ಲಂಡನ್ನಿಗೆ ತನ್ನ ಸ್ವ ಇಚ್ಛೆಯಿಂದ ಬಂದಿದ್ದಳು. ಆನುವಂಶೀಯ ಬಳುವಳಿಯಾಗಿ ಅವಳಿಗೆ ಬಂದಿದ್ದ ದೊಡ್ಡ ಗಾತ್ರದ ನಿತಂಬಗಳನ್ನು (ಸ್ಟಿಯಟೋಪೇಜಿಯ) ಪ್ರದರ್ಶಿಸಿ ಹಣ ಗಳಿಸುವ ಉದ್ದೇಶ ಹೊಂದಿದ್ದಳು.

ಅವಳಿಗೆ ಒಂದು ಪಂಜರ ಕೊಟ್ಟು, ಮೈಗೆ ಅಂಟುವ ಬಿಗಿ ಬಟ್ಟೆ ಹಾಕಿಸಿದರು. ಇದು, ಆ ಕಾಲದ ಎಲ್ಲಾ ಸಾಂಸ್ಕೃತಿಕ ನಿಯಮಗಳನ್ನು ಉಲ್ಲಂಘಿಸಿತ್ತು. ಕೆಲವು ತಿಂಗಳ ನಂತರ ಕೆಲಸ ಕಳೆದುಕೊಂಡ ಸೆರ, ಮದ್ಯ ವ್ಯಸನಿಯಾಗಿ, ತನ್ನ ಉಳಿವಿಗಾಗಿ ವೇಶ್ಯೆಯಾಗುವ ಅನಿವಾರ್ಯತೆ ಉಂಟಾಯಿತು. ಈ ಸ್ಥಿತಿಯಲ್ಲಿ ಯೊರೋಪ್‌ನ ಬೇರೆ ಬೇರೆ ನಗರಗಳಲ್ಲಿ ಅಲೆದು, ನಾಲ್ಕು ವರ್ಷದ ನಂತರ ಬಡತನದಿಂದ ಸತ್ತಳು. ಅವಳ ಅಸ್ಥಿಪಂಜರ ಮತ್ತು ಮೆದುಳನ್ನು ಪ್ಯಾರಿಸ್‌ನ ಮ್ಯೂಸಿಯಮ್ ಆಫ್ ಮ್ಯಾನ್‌ಕೈಂಡ್‌ನಲ್ಲಿ ಪ್ರದರ್ಶನಕ್ಕಿರಿಸಲಾಗಿತ್ತು. 2002 ವರೆಗೂ ವಸ್ತುಸಂಗ್ರಹಾಲಯದಲ್ಲಿದ್ದ ಅವಳ ಅವಶೇಷಗಳನ್ನು ಗ್ಯಾಮ್‌ಟೂಸ್ ವ್ಯಾಲಿಯಾದ ಅವಳ ತಾಯ್ನಾಡಿಗೆ ಕಳುಹಿಸಲು ನೆಲ್ಸನ್ ಮಂಡೇಲ ಮನವಿ ಮಾಡಿಕೊಂಡರು.